Taking up of the Laxmanathirtha Project in Coorg District.

*Q.—823. Sri A. P. APPANNA (Virajpet).—

Will the Government be pleased to state:—

(a) whether they intend to take up the Laxmanathirtha Project in Coorg District;

(b) if so, how many acres of wet lands, coffee lands and barren lands that will be submerged by it;

(c) how many acres of land will be irrigated by the said Project, and out of which, how many acres of land in Coorg District itself;

(d) whether they have received any representations from the people of Coorg against the construction of the said project;

A.—Sri VEERENDRA PATIL (Minister for Public Works) [on behalf of Sri S. NIJALINGAPPA (Chief Minister)].—

(a) Yes.

(b)

1.	Wet lands ...	1,122	acres.
2.	Coffee and Orange lands ...	46	"
3.	River and Valley portions ...	188	"
4.	Waste lands ...	984	"
	Total ...	2,340	"

(c) (i) an area of 7,000 acres of fresh lands and assured water supply to 10,000 acres of existing atchkat.

(ii) Of the above, an area of 3,000 acres of fresh lands are likely to come under irrigation in Coorg District.

(d) Yes.

Sri A. P. APPANNA.—What is the estimated cost of the project?

† Sri VEERENDRA PATIL.—The project report is just under scrutiny. Roughly, it will be about Rs. 150 lakhs.

Sri A. P. APPANNA.—Is it not a fact the former Coorg State had prepared an estimate regarding this project and if so, whether it has been revised?

Sri VEERENDRA PATIL.—According to the original estimate, the estimated cost of this project is Rs. 30.42 lakhs and afterwards on the suggestion of the Technical Advisory Committee, it was revised and it came to Rs. 81 lakhs to irrigate 3,000 and odd acres. The cost became very high. So alternatives were thought of and now according to the latest investigation report, it is proposed to have only one reservoir below the confluence of these two rivers—Lakshmanathirtha and Ramthirtha, which is going to irrigate 7,000 acres fresh atchkat and assured water supply to 10,000 acres of existing atchkat.

ಶ್ರೀ ಕೆ. ಎಚ್. ರಂಗನಾಥ್.—2,340 ಎಕರೆಗಳಲ್ಲಿ ಕೊಡಗಿನಲ್ಲಿ ಎಷ್ಟು ಪುಳುಗಡೆ ಯಾಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಇಬೆರ್ಲಾ ಕೊಡಗಿನಲ್ಲೇ ಮುಳುಗಡೆಯಾಗತಕ್ಕಂತಹ ಜಮೀನುಗಳು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರಕಾರಕ್ಕೆ ಈ ಕಟ್ಟೆಯನ್ನು ಕಟ್ಟಬೇಡಿ ಎಂದು ಬಂದಿರುವ ಮನವಿಗಳಲ್ಲಿ ಇದರಿಂದಾಗತಕ್ಕ ಅನಾನುಕೂಲಗಳೇನು ಎನ್ನುವುದನ್ನು ತಿಳಿಸಿದ್ದಾರೆಯೇ ! ಹಾಗಿದ್ದರೆ ಅದರ ಮುಖ್ಯಾಂಶಗಳೇನು ?

ಶ್ರೀ ವೀರೇಂದ್ರ ಪಾಟೀಲ್.—ವೆಜ್ ರ್ಯಾಂಡ್ಸ್ 1122 ಮುಳುಗಡೆಯಾಗುತ್ತಿರುವುದರಿಂದ ಭೂಮಿ ಮುಳುಗಡೆಯಾಗುತ್ತದೆ ಎಂದು ಹೇಳುವುದು ಸ್ವಾಭಾವಿಕ.

ಶ್ರೀ ಜಿ. ಎ. ಗೌಡ.—1,000 ಎಕರೆಗಳಿಗಿಂತ ಜಾಸ್ತಿ ಮುಳುಗಡೆಯಾಗುತ್ತಿರುವುದು ಯಾವ ಯಾವ ಭಾಗಗಳಲ್ಲಿ ಎನ್ನುವುದನ್ನು ತಿಳಿಸುವುದಕ್ಕಾಗುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಬಹುತೇಕ ವೈನೂರು ಜಿಲ್ಲೆಗೆ ಸೇರಿದ ಭಾಗಗಳು ಇಲ್ಲಿ ಬರುತ್ತವೆ. ಆದರೆ ನಿರ್ದಿಷ್ಟವಾಗಿ ಈಗ ಹೇಳಲಿಕ್ಕೆ ಬರುವುದಿಲ್ಲ.

ಶ್ರೀ ಎ. ಕೃಷ್ಣಶೆಟ್ಟಿ.—ಎಲ್ಲಾ ಕಡೆಗಳಲ್ಲಿಯೂ ಅಣೆಕಟ್ಟುಗಳನ್ನು ಕಟ್ಟುವಾಗ ಅಂತಹ ಅಣೆಕಟ್ಟುಗಳನ್ನು ಕಟ್ಟಕೊಡದು ಎಂದು ಮನವಿಗಳು ಬರುತ್ತವಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಅಣೆಕಟ್ಟು ಕಟ್ಟುವಾಗ ಜಮೀನುಗಳು ಮುಳುಗಡೆಯಾಗುವುದೂ ಸ್ವಾಭಾವಿಕ. ಮುಳುಗಡೆಯಾಗುವ ಜಮೀನುಗಳವರು ಅಣೆಕಟ್ಟನ್ನು ಕಟ್ಟಬೇಡಿ ಎಂದು ಹೇಳುವುದೂ ಸ್ವಾಭಾವಿಕ. ಆದರೆ ಎಲ್ಲ ಕಡೆಗಳಲ್ಲಿಯೂ ಬೇಡ ಎಂದರೆ ಅದನ್ನು ಸರಕಾರ ಕೇಳುವುದಿಲ್ಲ. ಇಲ್ಲಿ ಇದಕ್ಕೆ ಕಾರಣ ಇಲ್ಲಿನ ಕೆಲಸ ನಿಧಾನವಾಗಿರುವುದು.

ಶ್ರೀ ಇ. ನಾರಾಯಣ ಗೌಡ.—ಮುಳುಗಡೆಯಾಗುತ್ತಿರುವ ಕಾಫೀ ಪ್ಲಾಂಟರುಗಳಿಗೆ ಮತ್ತಿತರರಿಗೆ ಕಾಂಪೆನ್‌ಸೇಷನ್ನನ್ನೇನಾದರೂ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಕಾನೂನಿನ ಪ್ರಕಾರ ಕಾಂಪೆನ್‌ಸೇಷನ್ನೆನು ಕೊಡಬೇಕೋ ಅದು ಅವರಿಗೆ ಬಂದೇ ಬರುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈಗ ಬೇರೆ ಸ್ಕೆಟುಗಳನ್ನು ನಮಗೆ ಮಾಡುತ್ತಿರುವುದರಿಂದ ಅಲ್ಲಿ ಇದಕ್ಕಿಂತ ಕಡಮೆ ಎಸ್ಟಿಮೇಟಿನಲ್ಲಿ ಆಗುವಂತಿದ್ದರೆ ಮತ್ತು ಹೆಚ್ಚು ಮುಳುಗಡೆಯಾಗುವ ಜಮೀನುಗಳೂ ಬಾರದಿದ್ದರೆ ಅದರ ಬಗ್ಗೆ ಸರಕಾರದವರು ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಎಲ್ಲ ಆಲ್ಟರ್‌ನೇಟೀವ್‌ಗಳನ್ನೂ ವಿಚಾರಮಾಡಿ ಇದರ ಬಗೆಗೆ ಇನ್‌ವೆಸ್ಟಿಗೇಷನ್ನು ರಿಪೋರ್ಟು ಬರುವುದರಲ್ಲಿವೆ ಮತ್ತು ನಮ್ಮ ಇಂಜಿನಿಯರುಗಳು ತನಿಖೆ ಮಾಡಿರುವುದರಲ್ಲಿ ಈಗ ಮಾಡಿರುವುದು ಉತ್ತಮ ಎನ್ನುವ ನಿರ್ಧಾರಕ್ಕೆ ಬಂದಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಿಂದೆ ಲಕ್ಷ್ಮಣ ತೀರ್ಥಕ್ಕಾಗಿ ಬೇಕಾದಷ್ಟು ಖರ್ಚು ಮಾಡಿದುದನ್ನು ಈಗ ಕೈಬಿಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಕೈಬಿಡುತ್ತಿಲ್ಲ. ಮೊದಲು ಇನ್‌ವೆಸ್ಟಿಗೇಟು ಮಾಡಿದುದರಲ್ಲಿ ಸ್ವಲ್ಪ ಭೂಮಿಗೆ ಅನುಕೂಲವಾಗುತ್ತದೆ ಎಂದು ಗೊತ್ತಾಯಿತು. ಪುನಃ ಇದನ್ನು ವರ್ಕ್ ಔಟ್ ಮಾಡಿದುದರಲ್ಲಿ ಬೇರೆ ಕಡೆ ಅಣೆಕಟ್ಟು ಮಾಡಿದರೆ ಇನ್ನೂ ಹೆಚ್ಚಿನ ಭೂಮಿ ನೀರಾವರಿ ಪ್ರದೇಶಕ್ಕೆ ಸೇರುತ್ತದೆ ಎನ್ನುವುದು ತಿಳಿದುಬರುತ್ತದೆ. ಅದರಿಂದ ಈ ಲಕ್ಷ್ಮಣತೀರ್ಥದ ಅಣೆಕಟ್ಟನ್ನು ಕೈಬಿಡುವ ಪ್ರಶ್ನೆ ಇದರಲ್ಲಿ ಬರುವುದಿಲ್ಲ.

ಶ್ರೀ ಜಿ. ಎ. ಗೌಡ.—ಇದಕ್ಕಾಗಿ ಒಂದು ಕೋಟಿ ಐವತ್ತು ಲಕ್ಷ ಆಗುತ್ತದೆ ಎಂದು ಹೇಳಿದಿರಿ. ಇಲ್ಲಿ ಪರಿಹಾರಕ್ಕಾಗಿ ಕೊಡುವ ಹಣದ ಮೊತ್ತ ಸೇರಿದರೆ ಇಲ್ಲಿ ಆಗತಕ್ಕ ನೀರಾವರಿಯ ಭೂಮಿ ಬಹಳ ಕಡಿಮೆ ಪ್ರಮಾಣದಲ್ಲಾಗುತ್ತದೆ ಎನ್ನುವುದು ತಿಳಿದಿವೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ನಾನು ಹೇಳಿದುದು ಕರಾರುವಾಕ್ಕಾಗಿ ಅಲ್ಲ. ರಫ್ ಎಸ್ಟಿಮೇಟು ಒಂದಾವರೆ ಕೋಟಿಯಷ್ಟು ಆಗಬಹುದು ಎಂದು ಹೇಳಿದೆ. ಇದನ್ನು ಇನ್‌ವೆಸ್ಟಿಗೇಟು ಮಾಡುವಾಗ ಅಂದಾಜು ಎಷ್ಟು ಬರುತ್ತದೆ, ಪರಿಹಾರವಾಗಿ ಎಷ್ಟು ಕೊಡಬೇಕಾಗಿ ಬರುತ್ತದೆ ಎನ್ನುವುದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಅದಕ್ಕೆ ಆಗುವ ಖರ್ಚು ಎಲ್ಲವನ್ನು ಸೇರಿಸಿ ಅಂದಾಜು ಮಾಡಲಾಗುತ್ತದೆ.

Mr. SPEAKER.—Question No. 933.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಮಾನ್ಯ ಮಂತ್ರಿಗಳು ಈಗ ಇಲ್ಲಿಲ್ಲದಿರುವುದರಿಂದ ಈ ಪ್ರಶ್ನೆಯನ್ನು ನಾಳೆಯವರೆಗೆ ಮುಂದುವರಿಸಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಪ್ರಾರ್ಥಿಸುತ್ತೇನೆ.

Mr. SPEAKER.—Question No. 933 is held over.